# ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನಾ (ಪಿ.ಎಮ್.ಎಫ್.ಬಿ.ವೈ)

## ನಿಮ್ಮ ಬೆಳೆಯನ್ನು ಸುರಕ್ಷಿತ ಮಾಡಿ, ನಿಮ್ಮ ಭವಿಷ್ಯವನ್ನ ಸುರಕ್ಷಿತ ಮಾಡಿಕೊಳ್ಳಿ

## ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್‌ಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಮುಖಾಂತರ

HDFC ERGO
Take it easy!

ಪ್ರಾಕೃತಿಕ ಆಪತ್ತುಗಳು, ಕೀಟಗಳು ಹಾಗೂ ರೋಗಗಳ ದಾಳಿಯ ಕಾರಣದಿಂದ ಯಾವುದೇ ಸೂಚಿಸಿರುವ ಬೆಳೆಯ ವಿಫಲತೆಯ ಪರಿಸ್ಥಿತಿಯಲ್ಲಿ ಕೃಷಿಕರಿಗೆ ಅರ್ಥಿಕ ಧನಸಹಾಯವನ್ನು ಲಭ್ಯವಾಗಿಸಲು ರೈತ ಬಾಂಧವರಿಗೆ ವಿಮಾ ಸಂರಕ್ಷಣೆಯನ್ನು ನೀಡುವುದು **ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆ (ಪಿ.ಎಮ್.ಎಫ್.ಬಿ.ವೈ)** ಯ ಗುರಿಯಾಗಿರುತ್ತದೆ.

ಈ ಪ್ರಕಾರ ಈ ಯೋಜನೆಯು ಕೃಷಿಕರ ಸಂಪಾದನೆಗೆ ಒಂದು ಸ್ಥಿರತೆಯನ್ನು ನೀಡುತ್ತಿದೆ ಹಾಗೇ ಅವರಿಗೆ ತಮ್ಮ ಬೇಸಾಯವನ್ನು ಮುಂದುವರೆಸಲು ಹಾಗೂ ಬೇಸಾಯದ ಹೊಸ – ವಿಶಿಷ್ಟ ಹಾಗೂ ಆಧುನಿಕ ವಿಧಿ – ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುತ್ತಿದೆ.

### ಇದರ ಪ್ರಯೋಜನವನ್ನು ಯಾರು ಪಡೆಯಬಹುದು ?

ಎಲ್ಲಾ ಕೃಷಿಕರು, ಇದರಲ್ಲಿ ಪಾಲು ದಾರಿಕೆ ಮೇಲೆ ಹಾಗೂ ಹಂಚಿಕೆಯ ಮೇಲೆ ಸೂಚಿಸಿರುವ ಕ್ಷೇತ್ರಗಳಲ್ಲಿ ಸೂಚಿಸಿರುವ ಬೆಳೆಗಳ ಬೇಸಾಯ ಮಾಡುವವರನ್ನು ಸಹ ಒಳಗೊಂಡು, ವಿಮೆಯನ್ನು ಪಡೆಯಬಹುದು. ಆದರೆ ಕೃಷಿಕರ ಸೂಚಿಸಿರುವ/ವಿಮೆ ಮಾಡಿರುವ ಬೆಳೆಗಳು ವಿಮೆಗೆ ಒಳಪಟ್ಟಿರಬೇಕಾಗಿರುತ್ತದೆ. ಸಾಲವನ್ನು ಪಡೆಯುವ ಕೃಷಿಕರು ವಿಮಾ ರಕ್ಷಣೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

### ಯಾವುದಕ್ಕೆ ರಕ್ಷಣೆ ಇದೆ ?

ಕೆಳಗೆ ನೀಡಿರುವ ಬೆಳೆಯ ಅವಸ್ಥೆಗಳು ಹಾಗೂ ಬೆಳೆಗೆ ಸಂಭವಿಸಬಹುದಾದ ಹಾನಿಯ ಅಪಾಯವನ್ನು ಯೋಜನೆ ಯಡಿಯಲ್ಲಿ ಸಂರಕ್ಷಿಸಲಾಗಿದೆ.

- **ಬಿತ್ತನೆ/ನಾಟಿಯ ಅಪಾಯದಿಂದ ರಕ್ಷಿಸುವುದು:** 2019-20 ಮುಂಗಾರು ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ತಿತಿಗಳಿಂದ ಅಧಿಸೂಚಿತ ಘಟಕದಲ್ಲಿ ಶೇಕಡಾ 75% ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ (Prevented sowing/Planting Risk) ವಿಮಾ ಮೊತ್ತದ ಗರಿಷ್ಟ ಶೆಕಡಾ 25ರಷ್ಟು ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥಪಡಿಸಿ ಮುಂದಿನ ಅವಧಿಗೆ ವಿಮೆಯನ್ನು ರದ್ದುಪಡಿಸತಕ್ಕದ್ದು. ಈ ಸಂಬಂಧ ಬಿತ್ತನೆ ಕ್ಷೇತ್ರದ ವರಧಿಯನ್ನು ಘೋಷಿಸಲು ಜಿಲ್ಲೆಗಳ ಜಿಲ್ಲಾಧಿಕಾರಿಯನ್ನು ಹಾಗು ಮಳೆ ಮತ್ತು ಇತರೆ ಕೃಷಿ ಹವಾಮಾನದ ವರದಿಯನ್ನು ನೀಡಲು ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತವಾರಿ ಕೇಂದ್ರ, ಬೆಂಗಳೂರು ಇವರನ್ನು ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.
- **ನಿಂತಿರುವ ಬೆಳೆ :** ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡುಹಿಡಿಯಲಾದ ಇಳುವರಿ ಮಾಹಿತಿಯನ್ನು ಮಾತ್ರ ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಿ ಇತ್ಯರ್ತಪಡಿಸತಕ್ಕದ್ದು. ಇತರೆ ಇಳುವರಿ ಅಂದಾಜು ಮಾಡುವಂತಹ ವಿಧಾನಗಳಾದ ಆಣೆವಾರಿ ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇಲಾಖೆ ಅಥವಾ ಸಂಸ್ಥೆ, ಕ್ಷಾಮ, ಬರ, ಪ್ರವಾಹ ಎಂದು ಘೋಷಿಸಿ ಇಳುವರಿ ನಷ್ಟವನ್ನು ಅಂದಾಜು ಮಾಡುವ ಮಾಹಿತಿಯನ್ನು ಈ ಯೋಜನೆಯಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲು ಪರಿಗಣಿಸತಕ್ಕದ್ದಲ್ಲ.



ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್‌ಶ್ಯೂರನ್ಸ್ ಕಂಪನಿ ಲಿಮಿಟೆಡ್. (ಮೊದಲು ಎಚ್‌ಡಿಎಫ್‌ಸಿ ಜನರಲ್ ಇನ್‌ಶ್ಯೂರನ್ಸ್ ಕಂಪನಿ ಲಿಮಿಟೆಡ್) ನೋಂದಾಯಿತ ಹಾಗೂ ಕಾರ್ಪೊರೇಟ್ ಕಚೇರಿ: ಮೊದಲನೇ ಮಹಡಿ, ಎಚ್‌ಡಿಎಫ್‌ಸಿ ಹೌಸ್, 165 – 166 ಬ್ಯಾಕ್‌ಬೆ ರಿಕ್ಲೆಮೇಷನ್, ಎಚ್. ಟಿ. ಪರೇಖ್ ಮಾರ್ಗ, ಚರ್ಚ್‌ಗೇಟ್, ಮುಂಬಯಿ – 400 020. ಗ್ರಾಹಕರ ಸೇವಾ ವಿಳಾಸ : ಡಿ–301, 3ನೇ ಮಹಡಿ, ಈಸ್ಟರ್ನ್ ಬಿಸ್ನೆಸ್ ಡಿಸ್ಟ್ರಿಕ್ಟ್ (ಮ್ಯಾಗ್ನೆಟ್ ಮಾಲ್), ಎಲ್‌ಬಿಎಸ್ ಮಾರ್ಗ, ಭಾಂಡುಪ್ (ಪಶ್ಚಿಮ), ಮುಂಬಯಿ –400 078. ಕಸ್ಟಮರ್ ಸರ್ವಿಸ್ ನಂ.: 022 6234 6234 / 0120 6234 6234 | care@hdfcergo.com | www.hdfcergo.com. ಅಪಾಯಕಾರಿ ಅಂಶಗಳ ಮೇಲಿನ ಹೆಚ್ಚಿನ ವಿವರಗಳಿಗಾಗಿ, ಮಾರಾಟದ ನಿರ್ಧಾರಕ್ಕೆ ಬರುವ ಮೊದಲು ಮಾರಾಟ ಕೈಪಿಡಿ/ ಪ್ರಾಸ್ಪೆಕ್ಟ್‌ಗಳನ್ನು ದಯವಿಟ್ಟು ಓದಿ. ಮೇಲೆ ಪ್ರದರ್ಶಿಸಿರುವ ಟ್ರೇಡ್ ಲೋಗೋವು ಎಚ್‌ಡಿಎಫ್‌ಸಿ ಲಿಮಿಟೆಡ್ ಹಾಗೂ ಎರ್ಗೋ ಇಂಟರ್‌ನ್ಯಾಷನಲ್ ಎಜಿಗೆ ಸೇರಿದೆ ಹಾಗೂ ಪರವಾನಗಿಯ ಅಡಿಯಲ್ಲಿ ಕಂಪನಿಯಿಂದ ಬಳಸಲ್ಪಡುತ್ತಿದೆ. ಯುಐಡಿ : U66030MH2007PLC177117. ಯುಐಎನ್ : ಪ್ರೊಡೆಕ್ಟ್‌ನ ಹೆಸರು – ಸಿಎಸ್‌ಸಿ – ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನಾ – HDE-AG-P18-25-V01-17-18, ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನಾ – IRDAN125P0003V01201617. ಯುಐಡಿ : xxxx. ಐಆರ್‌ಡಿಐಎ ನೋಂದಣಿ ನಂ. 146.

| ಜಿಲ್ಲೆಯ ಹೆಸರು | ಕಾಲ | ಬೆಳೆಯ ಹೆಸರು | ವಿಮಾ ಮೊತ್ತ / ಹೆಕ್ಟೇರ್ (₹) | ಕೃಷಿಕರಿಂದ ಪಾವತಿಸಬೇಕಾದ ಪ್ರೀಮಿಯಂ / ಹೆಕ್ಟೇರ್ (₹) | ನೋಂದಣಿಯ ಕೊನೆಯ ದಿನಾಂಕ |
|---|---|---|---|---|---|
| **ದಾವಣಗೇರೆ** | ಮುಂಗಾರು | ಹತ್ತಿ(ನೀರಾವರಿ) | 67000 | 1340 | 16ನೇ ಜುಲೈ, 2019 |
| | ಮುಂಗಾರು | ಹತ್ತಿ (ಮಳೆಯಾಧಾರಿತ) | 43000 | 860 | 16ನೇ ಜುಲೈ, 2019 |
| | ಮುಂಗಾರು | ಬಟಾಣಿ (ಮಳೆಯಾಧಾರಿತ) | 29000 | 580 | 16ನೇ ಜುಲೈ, 2019 |
| | ಮುಂಗಾರು | ಈರುಳ್ಳಿ(ನೀರಾವರಿ) | 75000 | 1500 | 16ನೇ ಜುಲೈ, 2019 |
| | ಮುಂಗಾರು | ಈರುಳ್ಳಿ (ಮಳೆಯಾಧಾರಿತ) | 70000 | 1400 | 16ನೇ ಜುಲೈ, 2019 |
| | ಮುಂಗಾರು | ಎಳ್ಳು (ಮಳೆಯಾಧಾರಿತ) | 25000 | 500 | 16ನೇ ಜುಲೈ, 2019 |
| | ಮುಂಗಾರು | ಟೊಮೆಟೊ | 118000 | 2360 | 16ನೇ ಜುಲೈ, 2019 |
| | ಮುಂಗಾರು | ಬಾಜ್ರಾ (ಮಳೆಯಾಧಾರಿತ) | 29000 | 580 | 31ನೇ ಜುಲೈ, 2019 |
| | ಮುಂಗಾರು | ನೆಲಗಡಳೆ (ನೀರಾವರಿ) | 57000 | 1140 | 31ನೇ ಜುಲೈ, 2019 |
| | ಮುಂಗಾರು | ನೆಲಗಡಳೆ(ಮಳೆಯಾಧಾರಿತ) | 46000 | 920 | 31ನೇ ಜುಲೈ, 2019 |
| | ಮುಂಗಾರು | ಹಾರ್ಸ್‌ಗ್ರಾಮ್ (ಮಳೆಯಾಧಾರಿತ) | 18000 | 360 | 31ನೇ ಜುಲೈ, 2019 |
| | ಮುಂಗಾರು | ಜೋಳ (ನೀರಾವರಿ) | 40000 | 800 | 31ನೇ ಜುಲೈ, 2019 |
| | ಮುಂಗಾರು | ಜೋಳ (ಮಳೆಯಾಧಾರಿತ) | 34000 | 680 | 31ನೇ ಜುಲೈ, 2019 |
| | ಮುಂಗಾರು | ಮೆಕ್ಕೆ ಜೋಳ (ನೀರಾವರಿ) | 59000 | 1180 | 31ನೇ ಜುಲೈ, 2019 |
| | ಮುಂಗಾರು | ಮೆಕ್ಕೆ ಜೋಳ (ಮಳೆಯಾಧಾರಿತ) | 50000 | 1000 | 31ನೇ ಜುಲೈ, 2019 |
| | ಮುಂಗಾರು | ನವಣೆ (ಮಳೆಯಾಧಾರಿತ) | 27000 | 540 | 31ನೇ ಜುಲೈ, 2019 |
| | ಮುಂಗಾರು | ಭತ್ತ (ನೀರಾವರಿ) | 86000 | 1720 | 31ನೇ ಜುಲೈ, 2019 |
| | ಮುಂಗಾರು | ಭತ್ತ (ಮಳೆಯಾಧಾರಿತ) | 55000 | 1100 | 31ನೇ ಜುಲೈ, 2019 |
| | ಮುಂಗಾರು | ರಾಗಿ (ನೀರಾವರಿ) | 46000 | 920 | 31ನೇ ಜುಲೈ, 2019 |
| | ಮುಂಗಾರು | ರಾಗಿ (ಮಳೆಯಾಧಾರಿತ) | 38000 | 760 | 31ನೇ ಜುಲೈ, 2019 |
| | ಮುಂಗಾರು | ತೊಗರಿ (ಮಳೆಯಾಧಾರಿತ) | 40000 | 800 | 31ನೇ ಜುಲೈ, 2019 |
| | ಮುಂಗಾರು | ಸೂರ್ಯಕಾಂತಿ (ನೀರಾವರಿ) | 42000 | 840 | 14ನೇ ಆಗಸ್ಟ್, 2019 |
| | ಮುಂಗಾರು | ಸೂರ್ಯಕಾಂತಿ (ಮಳೆಯಾಧಾರಿತ) | 35000 | 700 | 14ನೇ ಆಗಸ್ಟ್, 2019 |

## ಯಾವುದಕ್ಕೆ ರಕ್ಷಣೆ ಇದೆ ?

- **ಬೆಳೆಯ ಕಟಾವು/ಕೊಯ್ಲಿನ ನಂತರದ ಹಾನಿಗಳು :** ಈ ಯೋಜನೆಯಡಿ 2019-20ರ ಮುಂಗಾರು ಹಿಂಗಾರು ಮತ್ತು ಬೇಸಿಗೆ ಹಂಗಮಿನಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲಿ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ (Post Harvest Lossess) ಕಟಾವು ಮಾಡಿದ ಎರಡು ವಾರದೊಳಗೆ (14 ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸಲಾಗಿದೆ. ರೈತರು ಈ ಬಗ್ಗೆ ಸಂಬಂದಪಟ್ಟ ಆರ್ಥಿಕ ಸಂಸ್ಥೆ ಅಥವಾ ಅನುಸ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಚೇರಿಗಳಿಗೆ ನೇರವಾಗಿ ಅಥವಾ ಕೃಷಿ/ತೋಟಗಾರಿಕೆ ಇಲಾಖೆ ಮೂಲಕ ತಕ್ಷಣ ಸೂಚನೆ ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಿ ಬೆಳೆವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗು ಹಾನಿಗೆ ಕಾರಣಗಳನ್ನು 48 ಗಂಟೆಗೊಳಗಾಗಿ ತಿಳಿಸಬೇಕು, ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ದಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ಕಂದಾಯ ಇಲಾಖೆ, ಕೃಷಿ ಹಾಗು ತೋಟಗಾರಿಕಾ ಇಲಾಖೆಯ ಆಡಳಿತವು ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರೊಂದಿಗೆ ಪಾಲ್ಗೊಳ್ಳತಕ್ಕದ್ದು.
- **ಸ್ಥಳೀಯ ಆಪತ್ತುಗಳು :** ಈ ಯೋಜನೆಯಡಿ ಮುಂಗಾರು ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ (Localized calamity) ಆಲಿಕಲ್ಲು ಮಳೆ, ಭೂ ಕುಸಿತ ಮತ್ತು ಬೆಳೆ ಮುಳುಗಡೆ (ಇನಂಡೇಷನ್) ಇವುಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವಯಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ. ಒಂದು ವೇಳೆ ಒಂದು ಅಧಿಸೂಚಿತ ಘಟಕದಲ್ಲಿ ಶೇಕಡಾ 25ಕ್ಕಿಂತ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾದರೆ ಆ ಅಧಿಸೂಚಿತ ಘಟಕದಲ್ಲಿ ಬೆಳೆ ವಿಮೆಗೆ ಒಳಪಟ್ಟ ರೈತರಲ್ಲಿ ಬೆಳೆ ನಷ್ಟವಾದ ರೈತರಿಗೆ ಮಾತ್ರ ಮಾದರಿ ಸಮಿಕ್ಷೆಗನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು. ಇಂತಹ ಸ್ಥಳಿಯ ಗಂಡಾಂತರಗಳ ಕಾರಣದಿಂದ ಬೆಳೆನಷ್ಟ ಸಂಭವಿಸಿದರೆ, ಬೆಳೆ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂದಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾಸಂಸ್ಥೆಗಳ ಕಛೇರಿಗಳಿಗೆ ತಕ್ಷಣ ಸೂಚನೆ ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 48 ಗಂಟೆಗಳೊಳಗಾಗಿ ತಿಳಿಸಬೇಕು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂದಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ಕಂದಾಯ ಇಲಾಖೆ, ಕೃಷಿ ಹಾಗು ತೋಟಗಾರಿಕಾ ಇಲಾಖೆಯ ಆಡಳಿತವು ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರಿಗೆ ನೆರವು ನೀಡತಕ್ಕದ್ದು.

## ಸಾಲಪಡೆಯದ ಕೃಷಿಕರಿಗಾಗಿ ಕಾಗದಪತ್ರಗಳು :

- ಗುರುತಿನ ಪತ್ರ, ಆಧಾರ್ ಕಾರ್ಡ್
- ಸಂಪೂರ್ಣವಾಗಿ ಭರ್ತಿಮಾಡಿರುವ ಪ್ರಸ್ತಾವ ಪತ್ರ
- ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ
- ಭೂಮಿಯ ಹಕ್ಕುಗಳ ಕೈಪಿಡಿ
- ಸಾಲಪಡೆದ ಕೃಷಿಕರಿಗೆ ಬ್ಯಾಂಕ್ ಮೂಲಕ ಕಡ್ಡಾಯವಾಗಿ ವಿಮೆಯನ್ನು ಮಾಡಿಸಲಾಗುವುದು

ರೈತರು ಹೆಚ್ಚಿನ ಮಾಹಿತಿಗಾಗಿ ಕಾಲ್ ಸೆಂಟರ್ ಟೋಲ್ ಫ್ರೀ ಸಂಖ್ಯೆ:
1800-425-7919
ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕರೆ ಮಾಡಿ
1800 2 660 700

ಸಂಪರ್ಕಿಸಿ :

ಎಚ್‌ಡಿಎಫ್‌ಸಿ ಎರ್ಗೊ ಜನರಲ್ ಇನ್‌ಶ್ಯೂರನ್ಸ್ ಕಂಪನಿ ಲಿಮಿಟೆಡ್. (ಮೊದಲು ಎಚ್‌ಡಿಎಫ್‌ಸಿ ಜನರಲ್ ಇನ್‌ಶ್ಯೂರನ್ಸ್ ಕಂಪನಿ ಲಿಮಿಟೆಡ್) ನೋಂದಾಯಿತ ಹಾಗೂ ಕಾರ್ಪೊರೇಟ್ ಕಚೇರಿ: ಮೊದಲನೇ ಮಹಡಿ, ಎಚ್‌ಡಿಎಫ್‌ಸಿ ಹೌಸ್, 165 – 166 ಬ್ಯಾಕ್‌ಬೆ ರಿಕ್ಲೆಮೇಷನ್, ಎಚ್. ಟಿ. ಪರೇಖ್ ಮಾರ್ಗ, ಚರ್ಚ್‌ಗೇಟ್, ಮುಂಬಯಿ – 400 020. ಗ್ರಾಹಕರ ಸೇವಾ ವಿಳಾಸ : ಡಿ–301, 3ನೇ ಮಹಡಿ, ಈಸ್ಟರ್ನ್ ಬಿಸ್ನೆಸ್ ಡಿಸ್ಟ್ರಿಕ್ಟ್ (ಮ್ಯಾಗ್ನೆಟ್ ಮಾಲ್), ಎಲ್‌ಬಿಎಸ್ ಮಾರ್ಗ, ಭಾಂಡುಪ್ (ಪಶ್ಚಿಮ), ಮುಂಬಯಿ –400 078. ಕಸ್ಟಮರ್ ಸರ್ವಿಸ್ ನಂ.: 022 6234 6234 / 0120 6234 6234 | care@hdfcergo.com | www.hdfcergo.com. ಅಪಾಯಕಾರಿ ಅಂಶಗಳ ಮೇಲಿನ ಹೆಚ್ಚಿನ ವಿವರಗಳಿಗಾಗಿ, ಮಾರಾಟದ ನಿರ್ಧಾರಕ್ಕೆ ಬರುವ ಮೊದಲು ಮಾರಾಟ ಕೈಪಿಡಿ/ ಪ್ರಾಸ್ಪೆಕ್ಟ್‌ಗಳನ್ನು ದಯವಿಟ್ಟು ಓದಿ. ಮೇಲೆ ಪ್ರದರ್ಶಿಸಿರುವ ಟ್ರೇಡ್ ಲೋಗೋವು ಎಚ್‌ಡಿಎಫ್‌ಸಿ ಲಿಮಿಟೆಡ್ ಹಾಗೂ ಎರ್ಗೊ ಇಂಟರ್‌ನ್ಯಾಷನಲ್ ಎಜಿಗೆ ಸೇರಿದೆ ಹಾಗೂ ಪರವಾನಗಿಯ ಅಡಿಯಲ್ಲಿ ಕಂಪನಿಯಿಂದ ಬಳಸಲ್ಪಡುತ್ತಿದೆ. ಯುಐಡಿ : U66030MH2007PLC177117. ಯುಐಎನ್ : ಪ್ರೊಡೆಕ್ಟ್‌ನ ಹೆಸರು – ಸಿಎಸ್‌ಸಿ – ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನಾ – HDE-AG-P18-25-V01-17-18, ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನಾ – IRDAN125P0003V01201617. ಯುಐಡಿ : xxxx. ಐಆರ್‌ಡಿಐಎ ನೋಂದಣಿ ನಂ. 146.